ಈ ಮಧ್ಯೆ ಸತ್ಯಂ ಕಂಪ್ಯೂಟರ್ಸ್ ಸಂಸ್ಥೆಯು ವಿವಾದದ ಸುಳಿಯಲ್ಲಿ ಸಿಲುಕಿದ್ದು, ಮೆ.ಮೈಥಾಸ್ ಸಂಸ್ಥೆಯು ಇದರ ಸಹವರ್ತಿ ಸಂಸ್ಥೆಯಾಗಿರವುದರಿಂದ ಈ ಸಂಸ್ಥೆಯ ನೈತಿಕ ನೆಲೆಗಳು ಪ್ರಶ್ನಾರ್ಹವಾಗಿದ್ದು, ಈ ಸಂಸ್ಥೆಯನ್ನು ಕೈಬಿಡುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

267 ಶ್ರೀ ಮಾಡಾಳ್ ವಿರೂಪಾಕ್ಷಪ್ಪ.ಕೆ (ಚನ್ನಗಿರಿ)
ಮಾನ್ಯ ಮುಖ್ಯಮಂತ್ರಿಗಳು

ಅ) ಸ್ವ ಹಿಡುವಳಿಯಲ್ಲಿ ಬೆಳೆದ ಮರಗಿಡಗಳನ್ನು ರೈತರೇ ಸ್ವಂತ ಕಟಾವು ಮಾಡಲು ಜಾರಿಯಲ್ಲಿರುವ **"The Karnataka Tree Preservation Act (Amendment) Bill- 2005"** ಇದುವರೆವಿಗೂ ಜಾರಿಗೆ ತರದೇ ಇರಲು ಕಾರಣಗಳೇನು?

1976 ರ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆಯ ಕೆಲವು ನಿಯಮಗಳಿಗೆ ತಿದ್ದುಪಡಿ ತರಲು ಸರ್ಕಾರವು ತಾತ್ವಿಕವಾಗಿ ನಿರ್ಧರಿಸಿರುತ್ತದೆ. ಈ ತಿದ್ದುಪಡಿಗೆ ಸಂಬಂಧಿಸಿದಂತೆ, ಕೆಲವು ವಿಷಯಗಳ ಬಗ್ಗೆ ಸ್ಪಷ್ಟೀಕರಣ ಬೇಕಾಗಿದ್ದು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಂದ ಸ್ಪಷ್ಟೀಕರಣ ಪಡೆಯಲಾಗುತ್ತಿದೆ. ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ತಿದ್ದುಪಡಿಯನ್ನು ತರುತ್ತಿರುವುದರಿಂದ, ಇದನ್ನು ಆದಷ್ಟು ಜಾಗ್ರತೆ ಜಾರಿಗೆ ತರಲು ಕ್ರಮವಹಿಸಲಾಗುವುದು.

335 ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ)
ಮಾನ್ಯ ಮುಖ್ಯಮಂತ್ರಿಗಳು

ಅ) ಹೈದ್ರಾಬಾದ್ ಕರ್ನಾಟಕ ಅತ್ಯಂತ ಹಿಂದುಳಿದಿರುವ ಭಾಗವನ್ನು ನಿಯಮ 371ರ ಅಡಿಯಲ್ಲಿ ಸರ್ಕಾರದ ಮೇಲೆ ಒತ್ತಡ ತರಲು ಯಾವ ಕ್ರಮ ಕೈಗೊಳ್ಳಲಾಗಿದೆ?

ರಾಜ್ಯ ಸರ್ಕಾರವು, ಹೈದರಾಬಾದ್–ಕರ್ನಾಟಕ ಪ್ರದೇಶದ ಸಾಮಾಜಿಕ ಅಸಮತೋಲನವನ್ನು ನಿವಾರಿಸುವ ಸಲುವಾಗಿ ಆ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಲು ಸಂವಿಧಾನದ ಅನುಚ್ಛೇದ 371ಕ್ಕೆ ಸೂಕ್ತ ತಿದ್ದುಪಡಿತರಬೇಕೆಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಮೇಲೆ ನಿರಂತರ ಒತ್ತಾಯ ತರಲಾಗುತ್ತಿದೆ. ಈವರೆಗೂ ಆರು ಬಾರಿ ಮನವಿಗಳನ್ನು ಸಲ್ಲಿಸಲಾಗಿದ್ದು ಸುಮಾರು 17 ಬಾರಿ ಪತ್ರ ವ್ಯವಹಾರ ನಡೆಸಲಾಗಿದೆ. ಇತ್ತೀಚೆಗೆ ಸನ್ಮಾನ್ಯ ಪ್ರಧಾನ ಮಂತ್ರಿಯವರು ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ, ಮಹಾರಾಷ್ಟ್ರದಲ್ಲಿ ರಚಿಸಿರುವಂತೆ ಅಭಿವೃದ್ಧಿ ಮಂಡಳಿಗಳನ್ನು ರಚಿಸುವ ಬಗ್ಗೆ ಮರು ಪರಿಶೀಲಿಸಬೇಕೆಂದು ಸೂಚಿಸಿದ್ದರು. ಇದಕ್ಕೆ ಉತ್ತರವಾಗಿ ರಾಜ್ಯ ಸರ್ಕಾರವು ದಿನಾಂಕ 31–1–2009ರ ತನ್ನ ಪತ್ರದಲ್ಲಿ ಸಂವಿಧಾನದ ಅನುಚ್ಛೇದ 371ನ್ನು ತಿದ್ದುಪಡಿಮಾಡಿ ಈ ಪ್ರದೇಶಕ್ಕೆ ವಿಶೇಷ ಸ್ಥಾನಮಾನ

ನೀಡಿದರೆ ಮಾತ್ರ ಈ ಸಮಸ್ಯೆ ಪರಿಹಾರವಾಗುವುದರಿಂದ ಅದರಂತೆ ಕ್ರಮವಹಿಸಿ ಈ ಪ್ರದೇಶದ ಜನರ ದೀರ್ಘಕಾಲದ ಬೇಡಿಕೆಯನ್ನು ಪೂರೈಸಬೇಕೆಂದು ಕೋರಿದೆ.

233 ಶ್ರೀ. ಕುಮಾರಸ್ವಾಮಿ ಹೆಚ್.ಕೆ

ಮಾನ್ಯ ಲೋಕೋಪಯೋಗಿ ಸಚಿವರು.

ಅ. ಹಾಸನ ಜಿಲ್ಲೆ, ಸಕಲೇಶಪುರ ಪಟ್ಟಣ ವ್ಯಾಪ್ತಿಯಲ್ಲಿ ಬೈಪಾಸ್ ರಸ್ತೆಯಲ್ಲಿ ನಿರ್ಮಿಸಲು ಭೂಸ್ವಾಧೀನ ಪ್ರಕ್ರಿಯೆ ಕೈಗೊಂಡಿರವುದು ನಿಜವೇ.

ಹೌದು. ರಾಷ್ಟ್ರೀಯ ಹೆದ್ದಾರಿ–48ರ ಕಿಮೀ.222.00 ರಿಂದ 225.54 ರವರೆಗೆ ಸಕಲೇಶಪುರ ಪಟ್ಟಣಕ್ಕೆ ಬೈಪಾಸ್ ರಸ್ತೆ, ನಿರ್ಮಾಣ ಮಾಡಲು 1987ರಲ್ಲಿ ಭೂಸ್ವಾಧೀನತೆಗೆ ಅಂದಾಜುಪಟ್ಟಿ ಮಂಜೂರಾಗಿ 2002–03ರಲ್ಲಿ 52.5 ಎಕರೆ ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.

ಆ. ಹಾಗಿದ್ದಲ್ಲಿ, ಕಾಮಗಾರಿಗಳನ್ನು ಪ್ರಾರಂಭಿಸದಿರಲು ಕಾರಣವೇನು?

ರಾಷ್ಟ್ರೀಯ ಹೆದ್ದಾರಿ–48ನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸಲು ಉದ್ದೇಶ ಇದ್ದುದರಿಂದ ಸಕಲೇಶಪುರ ಬೈಪಾಸ್ ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ವಿಳಂಬವಾಗಿರುತ್ತದೆ. 2009–10ರ ವಾರ್ಷಿಕ ಯೋಜನೆಯಲ್ಲಿ ಸಕಲೇಶಪುರ ಬೈಪಾಸ್ ರಸ್ತೆ ನಿರ್ಮಾಣ ಮಾಡಲು ರೂ.12.00 ಕೋಟಿ ಅನುದಾನಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ವಾರ್ಷಿಕ ಯೋಜನೆಯು ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಅನುಮೋದನೆಗೊಂಡ ನಂತರ ಅಂದಾಜು ಪಟ್ಟಿಯನ್ನು ತಯಾರಿಸಿ ಕೇಂದ್ರ ಸಾರಿಗೆ ಮಂತ್ರಾಲಯದಿಂದ ಮಂಜೂರಾತಿ ಪಡೆದು ಕಾಮಗಾರಿಯನ್ನು ಕೈಗೊಳ್ಳಬಹುದಾಗಿದೆ.

ಇ. ರಾಷ್ಟ್ರೀಯ ಹೆದ್ದಾರಿ–48ರಲ್ಲಿ ಸಕಲೇಶಪುರದಿಂದ ಗುಂಡ್ಯಾವರೆಗಿನ ರಸ್ತೆಯು ಕಟ್ಟಿರುವುದು ನಿಜವೇ; ಹಾಗಿದ್ದಲ್ಲಿ, ಈ ರಸ್ತೆಯನ್ನು ದುರಸ್ಥಿಗೊಳಿಸಲು ಸರ್ಕಾರ ಕ್ರಮಕೈಗೊಳ್ಳಲಾಗುವುದೇ;

ರಾಷ್ಟ್ರೀಯ ಹೆದ್ದಾರಿ–48ರ ಕಿಮೀ.222.00 ರಿಂದ ಕಿಮೀ. 263.00ರವರೆಗೆ ರಸ್ತೆಯು ಸಕಲೇಶಪುರದಿಂದ ಗುಂಡ್ಯದ ಮಧ್ಯೆ ಹಾದು ಹೋಗಿರುತ್ತದೆ. ಈ ಹೆದ್ದಾರಿಯು ಶಿರಾಡಿಘಾಟ್ ಭಾಗದಲ್ಲಿ ಹಾದುಹೋಗಿರುತ್ತದೆ. ಈ ಭಾಗದಲ್ಲಿ ಮೂರು ಕಾಮಗಾರಿಗಳು 36.71 ಕೋಟಿ ರೂ.ಗಳಿಗೆ ಮಂಜೂರಾಗಿದ್ದು ಕಾಮಗಾರಿಯನ್ನು 2008–09ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ. ಸದ್ರಿ ರಸ್ತೆಯು ಕಾಂಕ್ರೀಟ್ ರಸ್ತೆಯನ್ನು ಹೊರತುಪಡಿಸಿ ಹಲವು ಭಾಗಗಳಲ್ಲಿ ಹಾನಿಗೊಳಗಾಗಿರುತ್ತದೆ. ದಿನಾಂಕ 20.10.2008ರ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಹಾಗೂ ತನಿಖೆ ನಿಮಿತ್ತ ಈ ಭಾಗದಲ್ಲಿ ದುರಸ್ತಿ ನಿರ್ವಹಣ ಕಾಮಗಾರಿಯನ್ನು ದಿನಾಂಕ 6.1.2009ರವರೆಗೆ ಸ್ಥಗಿತಗೊಳಿಸಲಾಗಿತ್ತು. ಈಗ ಕಿಮೀ. 222.00ರಿಂದ 237.00ರವರೆಗೆ ರಸ್ತೆಯು ಸುಸ್ಥಿತಿಯಲ್ಲಿದೆ. ಕಿಮೀ. 237.00ರಿಂದ 263.00ರವರೆಗೆ